**ದಿನಾಂಕ: 30 .10.2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು: 2ನೇ ಪ್ರತಿವಾದಿ ಪರ ವಕೀಲರಿಂದ:**

1. ನಾನು ಸಾಕ್ಷ್ಯ ನುಡಿಯಲು ಬಂದಿದ್ದು ನ್ಯಾಯಾಲಯದಿಂದ ನನಗೆ ಯಾವುದೇ ನೋಟೀಸು ಬಂದಿರುವುದಿಲ್ಲ. ವಾದಿಯೇ ತನ್ನ ಪರ ಸಾಕ್ಷಿ ನುಡಿಯುವಂತೆ ನನ್ನನ್ನು ಈ ದಿನ ನ್ಯಾಯಾಲಯಕ್ಕೆ ಕರೆಸಿರುತ್ತಾರೆಂದರೆ ಸರಿ. ನಾನು ಸಲ್ಲಿಸಿರುವ ಪ್ರಮಾಣ ಪತ್ರವನ್ನು ವಾದಿಯೇ ವಕೀಲರಿಗೆ ಮಾಹಿತಿ ನೀಡಿ ತಯಾರು ಮಾಡಿರುತ್ತಾರೆಂದರೆ ನನಗೆ ಈ ಬಗ್ಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನಾನು ಸಲ್ಲಿಸಿರುವ ಪ್ರಮಾಣ ಪತ್ರದಲ್ಲಿರುವ ಅಂಶಗಳ ಬಗ್ಗೆ ನನಗೆ ಗೊತ್ತಿಲ್ಲ ಎಂದರೆ ಸರಿ. ವಾದಿಯು ಏನನ್ನು ಕೋರಿ ದಾವೆ ಸಲ್ಲಿಸಿರುತ್ತಾರೆಂದು ನನಗೆ ಗೊತ್ತಿಲ್ಲ. ವಾದಿಯು ಸರ್ವೆ ನಂ.131 ರ ಸಂಬಂಧ 2 ಎಕರೆ ವಿಸ್ತೀರ್ಣಕ್ಕೆ ದಾವೆ ಹಾಕಿರುತ್ತಾರೆ. ಸದರಿ ದಾವಾ ಸ್ವತ್ತು ವಾದಿಯ ತಂದೆಯು ಸರ್ಕಾರಕ್ಕೆ ಗೋಮಾಳ ಜಾಗಕ್ಕೆ ಅರ್ಜಿ ಹಾಕಿ ಮಂಜೂರು ಮಾಡಿಸಿಕೊಂಡಿರುತ್ತಾರೆ. 30 ರಿಂದ 40 ವರ್ಷಗಳ ಹಿಂದೆ ಸದರಿಯವರು ಅರ್ಜಿ ಸಲ್ಲಿಸಿದ್ದರು. ಅದರ ಮೂಲ ಸರ್ವೆ ನಂ.54 ಆಗಿತ್ತು. ಸದರಿ ಸರ್ವೆ ನಂ.54 ರಲ್ಲಿ ಸರಿ ಸುಮಾರು 100 ಎಕರೆ ಗೋಮಾಳ ಜಾಗ ಇತ್ತು ಎಂದರೆ ಸರಿ. ಸದರಿ ಜಾಗದಲ್ಲಿ ವಾದಿ ಹಾಗೂ ಪ್ರತಿವಾದಿಗಳು ಹಾಗೂ ಗ್ರಾಮಸ್ಥರು ಅನಧೀಕೃತವಾಗಿ ವ್ಯವಸಾಯ ಮಾಡುತ್ತಿದ್ದರು ಎಂದರೆ ನನಗೆ ಈ ಬಗ್ಗೆ ಗೊತ್ತಿಲ್ಲ. ಸಾಗುವಳಿ ಮಾಡುತ್ತಿದ್ದವರಿಗೆ ಅರ್ಜಿಯ ಮೂಲಕ ಸರ್ಕಾರವು ಜಾಗವನ್ನು ಮಂಜೂರು ಮಾಡಿತ್ತು ಎಂದರೆ ನನಗೆ ಈ ಬಗ್ಗೆ ಗೊತ್ತಿಲ್ಲ.

2. ಮಂಜೂರಾದ ಸಮಯದಲ್ಲಿ ಸದರಿ ದಾವಾ ಸ್ವತ್ತು ಯಾವುದೇ ರೀತಿಯಲ್ಲಿ ದುರಸ್ಥಿ ಪೋಡು ಆಗಿರಲಿಲ್ಲ ಎಂದರೆ ನನಗೆ ಗೊತ್ತಿಲ್ಲ. ಪ್ರತಿವಾದಿಗಳಿಗೂ ಸಹಿತ ಸರ್ವೆ ನಂ.54 ರಲ್ಲಿ ಜಮೀನು ಮಂಜೂರಾಗಿತ್ತು ಎಂದರೆ ನನಗೆ ಗೊತ್ತಿಲ್ಲ. ಅದರಂತೆ 1 ಎಕರೆ 30 ಗುಂಟೆಯಲ್ಲಿ ಪ್ರತಿವಾದಿಗಳು ಸ್ವಾಧೀನದಲ್ಲಿ ಇದ್ದಾರೆಂದರೆ ಸರಿ. 200 ರಿಂದ 300 ಮೀಟರ್ ಅಂತರದಲ್ಲಿ ನನ್ನ ಜಮೀನು ಇರುತ್ತದೆ. ನನ್ನ ಜಮೀನು ಇರುವ ಬಗ್ಗೆ ನಾನು ಯಾವುದೇ ಪಹಣಿ ನ್ಯಾಯಾಲಯಕ್ಕೆ ಹಾಜರು ಪಡಿಸಿಲ್ಲ. ನಾನು ದಾವಾ ಆಸ್ತಿಗೆ ಅಥವಾ ಪ್ರತಿವಾದಿಗಳ ಆಸ್ತಿಯ

ಆಜುಬಾಜುದಾರ ಆಗದೇ ಇದ್ದರೂ ಸಹಿತ ಈ ಬಗ್ಗೆ ಸುಳ್ಳು ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

3. ದಾವಾ ಆಸ್ತಿಯ ಚಕ್ಕುಬಂದಿ ಪೂರ್ವಕ್ಕೆ ವೆಂಕಟರಮಣ, ಪಶ್ಚಿಮಕ್ಕೆ ಸರ್ಕಾರಿ ಜಾಗ, ಉತ್ತರಕ್ಕೆ ಜಯಮ್ಮರವರ ಜಮೀನು ಮತ್ತು ದಕ್ಷಿಣಕ್ಕೆ ಗ್ರಾಮದ ಗಡಿ ಬರುತ್ತದೆ. ಪ್ರತಿವಾದಿಗಳು ಯಾವ ದಿನಾಂಕ, ತಿಂಗಳು ಹಾಗೂ ವರ್ಷದಲ್ಲಿ ಸ್ಥಳಕ್ಕೆ ಬಂದು ವಾದಿಯ ವಿರುದ್ದ ತೊಂದರೆ ಮಾಡಿದ್ದರು ಎಂಬುದಾಗಿ ನನಗೆ ಗೊತ್ತಿಲ್ಲ. ನಾನು ಮತ್ತು ವಾದಿ ಸ್ನೇಹಿತರು ಎಂದರೆ ಸರಿ. ಆದಕಾರಣ ಅವರಿಗೆ ಸಹಾಯ ಮಾಡಲು ನಾನು ಈ ರೀತಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ವಾದಿ ದಾವಾ ಸ್ವತ್ತಿನ ಸ್ವಾಧೀನದಲ್ಲಿ ಇಲ್ಲ ಎಂದರೆ ಸರಿಯಲ್ಲ. ವಾದಿಯ ಜಾಗವನ್ನು ಶೋಭಾರಾಣಿಯವರು 30 ಗುಂಟೆ ವಿಸ್ತೀರ್ಣಕ್ಕೆ ಒತ್ತುವರಿ ಮಾಡಿಕೊಂಡಿದ್ದಾರೆಂದರೆ ಸಾಕ್ಷಿಯು ಒತ್ತುವರಿ ಮಾಡಿಲ್ಲ ಆದರೆ ಅವರು ಉಳುಮೆ ಮಾಡುತ್ತಿದ್ದಾರೆ ಎಂದು ನುಡಿಯುತ್ತಾರೆ. ಸದರಿ ಶೋಭಾರಾಣಿಯವರು ಒತ್ತುವರಿ ಮಾಡಿರುವ 30 ಗುಂಟೆ ಜಾಗವನ್ನು ವಾದಿಯು ಈಗ ಪ್ರತಿವಾದಿಯಿಂದ ಪಡೆದುಕೊಳ್ಳುವ ಉದ್ದೇಶದಿಂದ ಸುಳ್ಳು ದಾವೆ ಹಾಕಿರುತ್ತಾರೆಂದರೆ ಸರಿಯಲ್ಲ.

**ಮರುವಿಚಾರಣೆಃ ಇರುವುದಿಲ್ಲ**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓದಿ, ಹೇಳಿ, ಕೇಳಿ ಸರಿ ಇದೆ.

**ಅಪರ ಸಿಜೆ ಮತ್ತು ಜೆ.ಎಂ.ಎಫ್.ಸಿ.,**
**ಕನಕಪುರ.**